‘ಹಡಗೂ ಕೂಡ! ಎರಡು ದೇಶ ನೋಡಿದ್ದೇನೆ. ರಜೆ ಬಂತೆಂದರೆ ಸಾಕು, ನನ್ನ ಗಂಡನ ಕಾಲು ನಿಲ್ಲುವುದಿಲ್ಲ. ಊರೂರು ಸುತ್ತಿಸುತ್ತಾನೆ. ಬೇಕಾದ್ದು ಕೊಡಿಸುತ್ತಾನೆ. ನವರತ್ನದ ಉಂಗುರವಂತೆ, ಚಿನ್ನದ ಸರವಂತೆ, ಯಾವುದೋ ದೇಶದ ಅತ್ತರಿನ ಬಾಟಲಿಯಂತೆ! ಒಂದೊಂದೇ ಹನಿ, ಮೈಯೊಳಗೆ ನರ ಮಿಡಿಯುವ ತಿರುವುಗಳಿಗೆ ಹಚ್ಚಿ ಹೆಬ್ಬೆರಳ ತುದಿಯಲ್ಲಿ ನೀವಿ, ನೋವಾಗದಷ್ಟು ಮೆತ್ತಗೆ ತಬ್ಬಿಕೊಂಡು ಉಸಿರುಗಟ್ಟಿಸುತ್ತಾನೆ. ಅವನದು ಪ್ರೀತಿಯೋ, ಹತಾಶ ಪ್ರಯತ್ನವೋ ಅರ್ಥವಾಗದೆ ನಾನು ಕಂಗಾಲಾಗುತ್ತಿದ್ದರೆ ದಿಢೀರನೆ ವಿಮಾನ ಹತ್ತಿಸಿ ಒಯ್ದು ನೆಲದೊಳಗಿನ ಕೊಳ್ಳ ತೋರಿಸುತ್ತಾನೆ. ಅಂದ್ಹಾಗೆ ನೀನು ವಿಮಾನ ನೋಡಿಲ್ಲವಾ?’ ಅಂದಳು.

‘ನೋಡಿದ್ದೇನೆ... ನೆಲದ ಮೇಲಿಂದ, ರಾತ್ರಿ ಕತ್ತಲಲ್ಲಿ ಆಗಸದ ಚಿಕ್ಕೆಗಳ ಮಧ್ಯೆ ನನ್ನ ಅಮ್ಮನನ್ನು ಅರಸುವಾಗಲೂ ವಿಮಾನಗಳು ಅಡ್ಡಬರುತ್ತವೆ. ಒಂದರೆಕ್ಷಣಕ್ಕೆ ಅವೂ ಚಿಕ್ಕೆಗಳೇ ಇರಬೇಕು ಅಂದುಕೊಳ್ಳುತ್ತೇನೆ. ಅಮ್ಮ ಕದಲುತ್ತಿದ್ದಾಳೇನೋ ಸಡಗರಗೊಳ್ಳುತ್ತೇನೆ. ಇಲ್ಲ, ಅಮ್ಮ ಅಲ್ಲೇ ಉಳಿದು ಹೋಗುತ್ತಾಳೆ. ವಿಮಾನ ಕದಲಿ ಹೋಗುತ್ತದೆ. ಬೆಳಕು ಹರಿದ ಮೇಲೆ ಉಳಿಯೋದು ಖಾಲಿ ಆಕಾಶ ಮತ್ತು ನಾನು!!’ ಅಂದವನು ತುಂಬ ಹೊತ್ತು ಸುಮ್ಮನಾಗಿಬಿಟ್ಟ.

ಅವರು ಮತ್ತದೇ ಶಿಥಿಲಗೊಂಡ ಮಹಲಿಗೆ ಬಂದು ಕುಳಿತರು. ಅವಳ ಮಡಿಲಲ್ಲಿ ಅವನು. ಅವಳ ಕೈಯಲ್ಲಿ ಅವನ ಎದೆಗೂದಲು. ಮಧ್ಯಾಹ್ನದ ಮೌನ ಮುಗಿಯದಷ್ಟು ವಿಸ್ತಾರವಾಗಿತ್ತು.

‘ನಿನಗೊಂದು ಹೆಸರಿಡಲಾ?’ ಅವನೆಂದ.

‘ಏನಂತ?’

‘ವೆನ್ನೆಲಾ!’

‘ಹಾಗೆಂದರೆ?’

‘ಬೆಳದಿಂಗಳು ಅಂತ. ಹಾಗೇ ಕರೀತೀನಿ, ವೆನ್ನೆಲಾ ಅಂತ!’ ಹುಚ್ಚನಂತೆ ಅವಳೆಡೆಗೆ ನೋಡಿದ. ಅವಳು ಖಿಲ್ಲನೆ ನಕ್ಕಳು, ಬೆಳದಿಂಗಳಿನಂತೇ.

‘ಹುಚ್ಚ, ಹೆಸರಿಡೋದಕ್ಕೂ ಅನುಮತಿ ಕೇಳ್ತಿದೀಯ. ನಿಂಗೆ ನಾನು ಹೆಸರಿಟ್ಟು ಯಾವುದೋ ಕಾಲವಾಯ್ತು. ಎದುರು ಬೀದಿಯಲ್ಲಿ ನೀನು ಮಾಂಸದ ಅಂಗಡಿ ತೆರೆದ ದಿನವೇ ನಿನಗೆ ಆ ಹೆಸರಿಟ್ಟಿದ್ದೆ. ಇವತ್ತಿಗೂ ನಾನು ಏಕಾಂತದಲ್ಲಿ ನಿನ್ನ ಬಗ್ಗೆ ಮಾತಿಗಿಳಿಯುವಾಗ ನಿನ್ನನ್ನು ಆ ಹೆಸರಲ್ಲೇ ಕರೆಯೋದು. ಕಿಟಕಿ ಪರದೆ ಸರಿಸಿದರೆ ಸಾಕು ನೀನು ಕಾಣಿಸುತ್ತಿದ್ದಿ. ಮರದ ದಿಂಡಿನ ಮೇಲೆ ಮಾಂಸದ ಕಲೆಗಳು. ನಿನ್ನ ಮಚ್ಚಿನ ಮೊನೆಯಲ್ಲಿ ಕರ್ತವ್ಯದ ಮೊನಚು. ಕಣ್ಣುಗಳಲ್ಲಿ ನಿರ್ದಯತೆಯಿರಬೇಕಾದ ಜಾಗದಲ್ಲಿ ಯಾವುದೋ ಮೈತ್ರಿ ಭಾವ. ನಿನ್ನನ್ನು ಎಷ್ಟು ಪ್ರೀತಿಸುತ್ತೇನೆ. ಗೊತ್ತೇನೋ? ಅಂಗಡಿ ಮುಚ್ಚಿ ಹಾಕಿ ನೀನು ಊರುಬಿಟ್ಟ ದಿನವೇ ಕೊನೆ, ಆಮೇಲೆ ನಾನು ಮಾಂಸ ಮುಟ್ಟಲಿಲ್ಲ’ ಸುಮ್ಮನಾದಳು.

‘ಆಮೇಲೆ ಎಲ್ಲೆಲ್ಲಿ ಅಲೆದೆ ಗೊತ್ತಾ ವೆನ್ನೆಲಾ? ಒಂದು ಹಿಡಿ ಪ್ರೀತಿ, ಬೊಗಸೆ ತುಂಬ ಸಂಗೀತ ಮತ್ತು ಇಂಥದೊಂದು ಮೃದುವಾದ ಮಡಿಲು ಹುಡುಕಿಕೊಂಡು ಎಷ್ಟೆಲ್ಲ ಅಲೆದೆ. ಹೆಂಡತಿ ಸಿಕ್ಕಳು, ಮಕ್ಕಳಾದರು. ಬೆನ್ನಟ್ಟಿಕೊಂಡು ಓಡಿದ ಹಗಲು–ರಾತ್ರಿಗಳ ಜೂಜಾಟದಲ್ಲಿ ಏನೆಲ್ಲ ಸಿಕ್ಕವು. ಆದರೆ ಮೂವತ್ತೈದರ ಹೊಸ್ತಿಲಿಗೆ ಬಂದು ಒಂದು ಕ್ಷಣ ದಣಿವಾರಿಸಿಕೊಳ್ಳಲು ಕೂತವನಿಗೆ ಛೆ, ತೋಳ ಕೊನೆಯಲ್ಲಿ ಜೋತಾಡುತ್ತಿರುವುದೆಲ್ಲ ಕೇವಲ ಬರಿಗೈಗಳೇ ಅನ್ನಿಸಿಬಿಟ್ಟಿತು. ಖಾಲಿಯಾದ ಮಾಂಸದಂಗಡಿಯಲ್ಲಿ ಉಳಿಯೋದು ಮಚ್ಚು ಮತ್ತು ಕಲೆ... ಎರಡೇ! ನೋಡು, ಎಷ್ಟೊಂದು ಖಾಲಿಯಾಗಿದ್ದೇನೆ. ಎಷ್ಟೊಂದು ಮೌನವಾಗಿದ್ದೇನೆ. ನಿನ್ನಂಥ ನೀನು ಇಷ್ಟು ಹೊತ್ತು ಎದುರಿಗಿದ್ದರೂ ನಿನ್ನನ್ನು ಏನೂ ಮಾಡಲಾಗದಷ್ಟು ಒಳ್ಳೆಯವನಾಗಿದ್ದೇನೆ. ಯಾರು ನಂಬುತ್ತಾರೆ ವೆನ್ನೆಲಾ.